

*'ಹೂವು ಚೆಲುವೆಲ್ಲ ನಂದೆಂದಿತು!*
*ಹೆಣ್ಣು ಹೂವ ಮುಡಿದು ಚೆಲುವೇ ತಾನೆಂದಳು'*

ಹೂವಿನಿಂದ ಹೆಣ್ಣಿಗೆ ಚೆಲುವು ಹೆಚ್ಚಾಯಿತೋ? ಹೆಣ್ಣಿಂದ ಹೂವಿನ ಚೆಲುವು ಇಮ್ಮಡಿಸಿತೋ ಹೇಳುವುದು ಕಷ್ಟ. ಹೆಣ್ಣೆಂದರೆ ಹೂವಿನಷ್ಟೇ ಮಧುರ, ಕೋಮಲ ಎಂದೆಲ್ಲಾ ವರ್ಣಿಸುವ ಕವಿಯ ಕಣ್ಣಿಗೆ ಅವಳ ಮುಖ ಕೆಂದಾವರೆ ನಾಸಿಕ ಸಂಪಿಗೆ, ನಗೆ ಬಿರಿದ ಮಲ್ಲಿಗೆಯಂತೆ! ಮುಡಿಗೇರಿದ ಮಲ್ಲಿಗೆ ಮಾಲೆಯ ಪರಿಮಳಕ್ಕೆ ಅವನು ದುಂಬಿಯಾಗುವನು.

ಹೀಗೆ ಹೆಣ್ಣಿಗೂ ಹೂವಿಗೂ ಅವಿನಾಭಾವ ನಂಟು. ಶ್ರಾವಣ ಬಂತೆಂದರೆ ಮನೆ, ಮಾರುಕಟ್ಟೆಗಳಲ್ಲಿ ಬಗೆ ಬಗೆಯ ಹೂಗಳದೇ ಕಂಪು. ಸಂಜೆಯಾದೊಡನೆ ಬಿರಿವ ಜಾಜಿ, ಮಲ್ಲೆ, ಮಲ್ಲಿಗೆಗಳ ಸುಗಂಧಕ್ಕೆ ಮನಸೋಲದವರುಂಟೆ! ಅಮ್ಮ, ಅಜ್ಜಿಯರಿಗೆ ಹಿಂದಿನ ದಿನಗಳಲ್ಲಿ ಬಾಲೆಯರಿಗೆ ಪೋಣಿಸಿ ಒಂದೆರಡು ಗಂಟೆ ಶ್ರಮಪಟ್ಟು ಹೆಣೆದ ಈ ಜಡೆಗಳನ್ನು ಮೈ ತುಂಬಾ ಆಭರಣಗಳು. ನಿರಿಗೆ ಚಿಮ್ಮುವ ಪರಕಾರಗಳನ್ನುಟ್ಟು ಅಕ್ಕಪಕ್ಕದ ಓಣಿಯ ಮನೆಗಳಿಗೆ ಹೋಗಿ ತೋರಿಸಿ ಬರುವ ಸಂಭ್ರಮ ನಾವೆಲ್ಲ ಅನುಭವಿಸಿದ್ದೇ.

ಕಾಲ ಬದಲಾದಂತೆ ಈಗಿನ ಬಾಬ್ ಕಟ್, ಬಾಯ್ ಕಟ್ ಹುಡುಗಿಯರಿಗೆ ಅಷ್ಟೊಂದು ಹೂವನ್ನು ತಲೆಯಲ್ಲಿ ಹೊತ್ತು ಓಡಾಡುವಷ್ಟು ಮನಸ್ಸು ಪುರುಸೊತ್ತು ಇಲ್ಲವೆಂದೇ ಹೇಳಬೇಕು. ಆದರೂ ಮದುಮಗಳಿಗೆ ಸೀಮಂತದ ಹುಡುಗಿಗೆ ಹೂವಿನಿಂದ ಮುಡಿಯನ್ನು ಅಲಂಕರಿಸಿದಾಗ ಅದನ್ನು ನೋಡುವ ಯಾರಿಗಾದರೂ ತಾವೂ ಒಮ್ಮೆ ಅಂತಹ ಜಡೆ ಹಾಕಬೇಕು ಎನಿಸದಿರುತ್ತದೆಯೆ?

ಚಿತ್ರದಲ್ಲಿರುವ ಯುವತಿಯರ ಬಗೆ ಬಗೆಯ ಹೂವಿನ ಜಡೆಗಳನ್ನು ಗಮನಿಸಿ ಆಶ್ಚರ್ಯವಾಗಿರಬೇಕಲ್ಲವೆ? ನಿಜ, ಮಲ್ಲಿಗೆ ಮೊಗ್ಗಿನ ಅಥವಾ ತಾಳೆಗರಿ (ಕೇದಿಗೆ) ಜಡೆ ಮಾತ್ರ ನೋಡುತ್ತಿದ್ದವರಿಗೆ ಸುಗಂಧರಾಜ, ಕಲ್ಕತ್ತಮೊಗ್ಗು, ಗುಲಾಬಿ ಪಕಳೆಗಳೂ, ಆರ್ಕಿಡ್ ಹೂವುಗಳು, ಜರ್ಬರ, ಚೆಂಡು ಹೂವು ಮುಂತಾದ ಹೂಗಳೆಲ್ಲಾ ನಾಗವೇಣಿಯರ ನೀಳ ಜಡೆಗಳನ್ನು ಕಲಾತ್ಮಕವಾಗಿ ಅಲಂಕರಿಸಿದಾಗ ಹೀಗೂ ಸಾಧ್ಯವಲ್ಲವೆ? ಎಂದು ಹೊಸ ಆವಿಷ್ಕಾರವನ್ನು ಮೆಚ್ಚಿಕೊಳ್ಳದಿರಲಾರಿರಿ. ಕಲಾವಿದನ ಕೈ ಚಳಕದಲ್ಲಿ ಮೂಡುವ ಕಲಾಕೃತಿಗಳಷ್ಟೇ ಈ ಹೂಗಳಿಂದ ಹೆಣೆದ ವಿವಿಧ ವಿನ್ಯಾಸಗಳ ಜಡೆಗಳು ನಾರಿಯರ ಮನಸೂರೆಗೊಳ್ಳುವಂತಿವೆ.

ಸುಗಂಧರಾಜದ ಹೂಗಳು ಹಾರಗಳಾಗಿ ಮಾತ್ರ ಮಾರುಕಟ್ಟೆಯಲ್ಲಿ ಕಾಣ ಸಿಗುತ್ತವೆ. ಬಿಡಿ ಹೂಗಳನ್ನು ತಂತಿ ಸಹಾಯದಿಂದ ಕಮಾನಿನಂತೆ ಬಗ್ಗಿಸಿ ಹೆಣೆದು ಗಂಟಿನ ಸುತ್ತ ಮುಡಿದಾಗ, ಹಾಗೆಯೇ ಉದುರಿ ಬಿದ್ದ ಗುಲಾಬಿ ಪಕಳೆಗಳನ್ನು ಹೀಗೆ ಜೋಡಿಸಿ ಸೀರೆ ಮ್ಯಾಚಿಂಗ್ ಮಾಡಿ ಮುಡಿದುಕೊಳ್ಳುವ ಈ ಪರಿ. ಪಾರ್ಕುಗಳು, ಮನೆಗಳ ಮುಂದೆ ಬಿಟ್ಟಿರುವ ಅಲಂಕಾರಿಕ ಸಸ್ಯಗಳ ಹೂಗಳನ್ನು ಪರಿವರ್ತಿಸಿ ಜಡೆಗಳ ಮೇಲೆ ಶೃಂಗರಿಸಿದಾಗ ಹೀಗೂ ಸಾಧ್ಯವೇ? ಎಂದು ಅಚ್ಚರಿ ಪಡುವಿರಿ. ಗಿಡ್ಡ ಕೂದಲಿದ್ದರೂ ಚಿಂತೆಯಿಲ್ಲ. ಈಗ ಚೌರಿ ಸಹಾಯದಿಂದ ನಾಗವೇಣಿ, ನೀಲವೇಣಿಯರಾಗಬಹುದು. ಹೂವಿನ ಜಡೆ ಹಾಕಿಕೊಂಡು ಸಂಭ್ರಮಿಸಬಹುದು. ತಡವೇಕೆ? ನೀವು ಪ್ರಯತ್ನಿಸಿ. ಮಲ್ಲಿಗೆಗಾಗೇ ಕಾಯದೆ ನಿಮ್ಮ ಕಣ್ಣೆದುರು ಕಾಣುವ ಯಾವುದೇ ಸುಂದರ ಹೂವಿಗೊಂದು ರೂಪ ಕೊಡಿ. ಇಂಥ ಜಡೆಗಳನ್ನು ಹಾಕಿ ಕೊಂಡ ಮೇಲೆ ವೈವಿಧ್ಯಮಯವಾದ ಸೀರೆ ಉಡದಿದ್ದರೆ ಹೇಗೆ? ಫಿಶ್ ಕಟ್, ಮಹಾರಾಣಿ, ದೇವದಾಸ್, ಸ್ಪೆಷಲ್ ಗುಜರಾತಿ ಹಾಗೂ ಸಾಮಾನ್ಯ ರೀತಿಯ ಸೀರೆಗಳಲ್ಲಿ ನೀವು ಇನ್ನಷ್ಟು ಸುಂದರವಾಗಿ ಕಾಣ ಬಲ್ಲಿರಿ.

ಬಣ್ಣ ಬಣ್ಣದ ಸೀರೆಯುಟ್ಟ ನಾರಿ
ತುಂಬು ಚಂದಿರ ಅವಳ ಮಾರಿ
ನಡಿಗೆ ನಗೆ ನವಿಲ ದಾರಿ!

ಸೀರೆಯ ಸೊಬಗು ಅದನ್ನುಟ್ಟವರ ಮೇಲೆ ಇನ್ನಷ್ಟು ಶೋಭೆಯನ್ನು ನೀಡುತ್ತದೆ. ಉಡುವ ಶೈಲಿ ಬೇರೆ ಬೇರೆಯಾದರೂ ಸೀರೆಯುಟ್ಟ ನಾರಿ ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಪ್ರತಿಬಿಂಬ. ಮದುವೆಯಲ್ಲೀಗ ಕಂಚಿ ಸೀರೆ, ಗಾಗ್ರಾ ಚೋಲಿಗಳ ಬಳಕೆ ಹೆಚ್ಚಾಗಿದ್ದರೂ ಈ ಎರಡು ಉಡುಪುಗಳನ್ನು ಒಮ್ಮೆಗೇ ಉಡುವಂತಾದರೆ? ಆಶ್ಚರ್ಯವೇ? ಚಿತ್ರ ನೋಡಿ. ಇದೇ ಕಾನ್‌ಕಾನ್ (Concon) ಶೈಲಿ! ಗಾಗ್ರಾ ಮೇಲೆ ಅರ್ಧಕ್ಕೆ ಸೀರೆಯನ್ನು ನೆರಿಗೆ ಮಾಡಿ ಉಡುವ ಈ ಹೊಸ ಮಾದರಿ ಇತ್ತೀಚಿನ ಟ್ರೆಂಡ್.

ಹಾಗೆಯೇ ಬೈತಲೆಯ ಮಧ್ಯೆ ರಾರಾಜಿಸುವ ಆಭರಣ ಕೂಡ ಸ್ವಲ್ಪ ಸ್ಥಾನ ಪಲ್ಲಟ ಮಾಡಿಕೊಂಡಾಗ ಹೇಗೆ ಕಾಣಬಹುದು? ವಾಹ್... ಮೊಘಲ್ ಶೈಲಿಯಲ್ಲಿ ತೊಟ್ಟಂತಿದೆಯಲ್ಲದೆ ಮೂರ್ನಾಲ್ಕು ಸಣ್ಣ ಎಳೆಗಳ ಈ ಬೈತಲೆ ಬೊಟ್ಟು ಮುಖದ ಅರ್ಧದಲ್ಲಿ ಮಾತ್ರ ಎದ್ದು ಕಾಣಿಸುವುದು.

ಮಿಂಚುವ ಕಣ್ಣಂಚಿನ ಕಾಡಿಗೆ
ತುಂಡಲೆಯುವ ಮುಂಗುರುಳ ಹಾಡಿಗೆ
ಎಂಥ ಚೆಂದ ಈ ಉಡುಗೆ, ತೊಡುಗೆ!

ಈ ಸೀರೆಯ ಆಕರ್ಷಣೆ ವಿದೇಶಿಯರನ್ನು ಸೆಳೆಯುವ ಶಕ್ತಿಯಿರುವಂತದ್ದು. ಹಣೆಯ ಬೊಟ್ಟು, ಬಣ್ಣ, ಬಣ್ಣದ ಸೀರೆಗಳು ವಿದೇಶಿ ಮಹಿಳೆಯರಿಗೆ ಒಮ್ಮೆಯಾದರೂ ಧರಿಸಲೇ ಬೇಕೆಂಬ ಬಯಕೆ. ಪ್ಯಾಂಟಿನ ಮೇಲೆ ಅರ್ಧ ಸೀರೆ (ದಾವಣಿಯಂತೆ) ಉಟ್ಟು ಹೊಸ ಫ್ಯಾಷನ್ ಸೃಷ್ಟಿಸಿದವರೂ ಇದ್ದಾರೆ. ವಿದೇಶದಲ್ಲೇ ನೆಲೆಸಿದ ಭಾರತೀಯರ ಮಟ್ಟಿಗೆ ಮಲ್ಲಿಗೆ, ಕನಕಾಂಬರಗಳೆಲ್ಲಾ ಕೈಗೆಟುಕದ ಕನಸಿನದು. ಆದರೆ ಆರ್ಕಿಡ್‌ಗಳನ್ನೇ ಹೂ ಜಡೆಗಳಾಗಿಸಿ ಸಂಭ್ರಮಿಸಬಹುದು.

## ಬಗೆ ಬಗೆಯ ಕೇಶಾಲಂಕಾರ

ಬೇಲೂರ ಶಿಲ್ಪಗಳಲ್ಲಿನ ಬಾಲೆಯರ ಕೇಶ ವಿನ್ಯಾಸಗಳಿಗೆ ಸವಾಲು ಹಾಕಬಹುದಾದಷ್ಟು ಚೆಂದದ ಸೊಬಗಿನ–ಬೆಡಗಿನ, ಕೇಶ ಶೃಂಗಾರಗಳ ಸಾಧ್ಯತೆಯನ್ನು ವಿವಿಧ ಸಮಾರಂಭಗಳಿಗೆ ಅನುಸಾರವಾಗಿ ಉದ್ದ ಕೂದಲಿಗೂ, ಗಿಡ್ಡ ಕೂದಲಿಗೂ ಒಪ್ಪುವಂತೆ ಎಲ್ಲರ ಮೆಚ್ಚುಗೆ ಗಳಿಸುವಂತಹ ವಿನ್ಯಾಸಗಳನ್ನು ನೋಡಬಹುದು.

ಹೀಗೆ ಸೌಂದರ್ಯ ತಜ್ಞರ ಕೈಗಳಿಗೆ ಬಿಡುವಿಲ್ಲದ ಕೆಲಸ ಸಿಗುವ ಮದುವೆ, ಹಬ್ಬಗಳು ಇತ್ಯಾದಿ ಸಮಾರಂಭಗಳಲ್ಲಿ ನಮ್ಮ ಕಲ್ಪನೆ, ಪ್ರತಿಭೆ, ಕೈಚಳಕಗಳಿಗೆ ಸಾಕಷ್ಟು ಸಮಯ, ಅವಕಾಶ ಸಿಗುತ್ತಲೇ ಇರುತ್ತದೆ. ಹಬ್ಬಗಳ ಸಂಭ್ರಮಕ್ಕೆ, ಉಡುಗೆ ತೊಡುಗೆಗಳ ಜತೆಗೆ ಅಲಂಕಾರಿಕ ಜಡೆ, ಸುಂದರ ಕೇಶವಿನ್ಯಾಸ, ಹೂಗಳ ಚಿತ್ತಾರ ಒಂದಕ್ಕಿಂತ ಒಂದು ಸೊಗಸಾಗಿ ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿವೆ.